ಅಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ. ತಾವು ಬೇರೆ ರೂಪದಲ್ಲಿ ಪ್ರಸ್ತಾವನೆಯನ್ನು ತೆಗೆದುಕೊಂಡು ಬನ್ನಿ.

ಸಂಪಂಗಿರಾಮನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಮಾದರಿಶಾಲೆಯಲ್ಲಿರುವ ಆಳವಾದ ಬಾವಿ

166 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಾಜಿನಗರ ಕ್ಷೇತ್ರದ ಸಂಪಂಗಿರಾಮನಗರ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಬಳಿ ಒಂದು ದೊಡ್ಡ ಮತ್ತು ಆಳವಾದ ಬಾವಿ (ಕಲ್ಯಾಣಿ)ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಲ್ಯಾಣಿ ಮಳೆ ನೀರಿನಿಂದ ತುಂಬಿ ನಿಂತಿದ್ದು, ಶಾಲಾ ಮಕ್ಕಳ ಜೀವನಕ್ಕೆ ಹಾನಿಕರವಾಗಿರುವುದು ಮತ್ತು ಒಂದು ಮಗು ಅದರಲ್ಲಿ ಮುಳುಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಕೋರಿಕೆಯನ್ನು ಅನೇಕ ಸಲ ಸದನದಲ್ಲಿ ಪ್ರಸ್ತಾಪಿಸಿದ್ದರೂ ಸಹ ಬೇಡವಾದ ಈ ಬಾವಿಯನ್ನು ಮುಚ್ಚಿಸದೆ ಸರ್ಕಾರವು ಉದಾಸೀನದಿಂದ ಇರಲು ಕಾರಣವೇನು?

ಈ) ಹೊನೇ ಪಕ್ಷ ಈಗಲಾದರೂ ಸರ್ಕಾರ ತಡಮಾಡದೇ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು

ಇ) ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ.

ಈ) ಅನುದಾನ ಬಿಡುಗಡೆಯಾದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಹೊಸದೇನೂ ಅಲ್ಲ, ಹಿಂದೆಯೂ ನಾನು ಇಲ್ಲಿ ನಾಲ್ಕು ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದೆಸೆಯಲ್ಲಿ ಪ್ರತಿಯೊಬ್ಬ ಅಧ್ಯಕ್ಷರು ಆಶ್ವಾಸನೆ ಕೊಟ್ಟರು. ಪ್ರತಿಯೊಬ್ಬ ಮಂತ್ರಿಗಳೂ ಆಶ್ವಾಸನೆಯನ್ನು ಕೊಟ್ಟರು. ಅದೇ ತರಹ ಉತ್ತರ ಈಗಲೂ ಬಂದಿದೆ. ಅಲ್ಲ ಬಡಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಆ ಬಾವಿ ಬಿದ್ದು ಮಕ್ಕಳು ಸಾಯುವ ಪರಿಸ್ಥಿತಿ ಇದೆ. ಒಂದು ಮಗು ಬಿದರಲ್ಲಿ ಮುಳುಗಿ ಸತ್ತುಹೋಯಿತು. ಇದನ್ನೆಲ್ಲಾ ಹೇಳಿದಮೇಲೂ ಸಹ ಸ್ವಲ್ಪವು ಕರುಣೆ ಇಲ್ಲವೇ? ಅಧಿಕಾರಿಗಳೂ ಕೂಡ ಇದನ್ನು ಗಮನಿಸಿಲ್ಲ. ಆ ಶಾಲೆಗೆ ಸಂಬಂಧಪಟ್ಟ ಹಾಗೆ ಒಂದು ಕಟ್ಟಡ ಇದೆ. ಅದರಲ್ಲಿ ಬಾವಿ ಅಂದರೆ ಕಲ್ಯಾಣಿ ಎಂದು ಏನು ಹೇಳುತ್ತೇವೆ ಅದು ಇದೆ. ಇದು ಬಹಳ ಪುರಾತನಕಾಲದ್ದು. ಅದನ್ನು ಮುಚ್ಚಬೇಕು. ಇಲ್ಲ ಸರಿಪಡಿಸಿ ನೀರು ಹರಿದುಹೋಗುವಂತೆ ಮಾಡಬೇಕು. ಈಗ ಏನು ಉತ್ತರ ಕೊಟ್ಟಿದ್ದೀರೆಂದರೆ ಈ ಬಾವಿಯನ್ನು ಮುಚ್ಚಲು 1989ನೇ ವರ್ಷದಲ್ಲಿಯೇ ಕಾರ್ಯಪಾಲಕ ಅಭಿಯಂತರು, ವಿವಿದೋದ್ದೇಶ ತಾಂತ್ರಿಕ ವಿಭಾಗ, ಬೆಂಗಳೂರು ಇವರಿಗೆ ಬರೆಯಲಾಗಿದೆ ಎಂದು ಉತ್ತರವನ್ನು ಬರೆದುಬಿಟ್ಟರೆ ಆಗಿಹೋಯಿತೇ?

ಅಧ್ಯಕ್ಷರು : ತಮಗೆ ಏನು ಆಗ ಬೇಕು ಎಂಬುದನ್ನು ಹೇಳಿ?

ಶ್ರೀ ಎ.ಕೆ. ಅನಂತಕೃಷ್ಣ: ನಮ್ಮಲ್ಲಿ ಒಂದು ಸರ್ಕಾರ ಇದೆಯೇ? ಆಡಳಿತ ಇದೆಯೇ? ಒಂದು ಉಸ್ತುವಾರಿ ನಡೆಯುತ್ತಿದೆಯೇ? ಮಕ್ಕಳ ಪ್ರಾಣ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಬರೆದಿದ್ದೇವೆ ಎಂದರೆ ಏನು ಅರ್ಥ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ನಾಲ್ಕು ವರ್ಷಗಳಿಂದ ಎತ್ತುತ್ತಿರುವುದಾಗಿ ಎಂದು ಹೇಳಿದ್ದಾರೆ. ಈ ವೇಳೆಯಲ್ಲಿ ಈ ಕೆಲಸವಾಗಬೇಕಾಗಿತ್ತು ಎಂದು ನನಗೂ ಅನಿಸುತ್ತದೆ. ಏತಕ್ಕೆಂದರೆ ಒಂದು ಮಗು ಆ ಹೊಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದೆ ಎಂಬುದನ್ನೂ ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗಾಗಲೇ ಇದು ಆಗಬೇಕಾಗಿತ್ತು. ನೆಕ್ಸ್ಟ್ ಅಕಾಡಮಿಕ್ ಇಯರ್ ಜೂನ್ ಒಂದರ ಒಳಗೆ, ಒಂದು ಒಂದೂವರೆ ಲಕ್ಷ ರೂ. ಏನು ಬೇಕಾಗುತ್ತದೆ, ಆ ಹೊಂಡವನ್ನು ಮುಚ್ಚಲು,ಅದನ್ನು ನಮ್ಮ ಇಲಾಖೆಯಿಂದಲೇ ಬಿಡುಗಡೆ ಮಾಡಿ ಈ ರೀತಿ ಅಪಘಾತಗಳು ಆಗದಂತೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಿಲಿಚ್ಚಿಸುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ: ಅವರ ಉತ್ತರ ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಒಂದು ಲಕ್ಷ ಎರಡು ಲಕ್ಷ ಎಂದು ಹೇಳುತ್ತಲೇ ಇದ್ದಾರೆ. ನಾಲ್ಕು ವರ್ಷಗಳಿಂದ ಅವರನ್ನು ಕೇಳಿಕೊಳ್ಳುತ್ತಿದ್ದೇನೆ ಇದುವರೆಗೂ ನನಗೆ ಸರಿಯಾದ ಉತ್ತರ ಬಂದಿಲ್ಲ. ಈ ಕ್ಷೇತ್ರದಲ್ಲಿ ನಾನು ತಲೆಎತ್ತಿ ತಿರುಗಾಡಲು ಆಗುತ್ತಿಲ್ಲ ಸಾಧಾರಣವಾದ ಉತ್ತರ ನನಗೆ ಹಿಡಿಸುವುದಿಲ್ಲ. ತಾವುಗಳು ದಯವಿಟ್ಟು ಅದನ್ನು ಸರಿಪಡಿಸಬೇಕು ನೀರು ಹರಿದುಹೋಗುವ ಹಾಗೆ ಮಾಡಿ ಅದರ ಮೇಲೆ ಚಾವಣಿ ತರಹ ಹಾಕಬೇಕು. ಈ ರೀತಿಯ ಯೋಜನೆ ಏನಾದರೂ ನಿಮ್ಮ ಸರ್ಕಾರದಲ್ಲಿ ಮಾಡಿದ್ದೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ನಾನು ಹೇಳುವುದನ್ನು ಹೇಳಿದ್ದೇನೆ. ಇದಕ್ಕಿಂತ ಹೆಚ್ಚು ಹೇಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಹಾದೇವ್: ತಾವುಗಳು ಸದಸ್ಯರ ಬಗ್ಗೆ ಮಾತನಾಡುವಾಗ ಸೌಜನ್ಯದಿಂದ ಗೌರವಯುತವಾದ ಉತ್ತರ ಕೊಡಬೇಕು, ಏನು ನಿಮ್ಮ ಮನೆಯ ಸ್ವತ್ತು ಎಂದು ತಿಳಿದು ಕೊಂಡಿದ್ದೀರಾ? ಸಚಿವರು ಸಮಾಧಾನದಿಂದ ಉತ್ತರವನ್ನು ಕೊಡಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈಗ ಈ ಕೆಲಸವನ್ನು ಇದುವರೆಗೂ ಮಾಡಿರಲಿಲ್ಲ ಮಾಡಬೇಕಾಗಿತ್ತು. ಇಷ್ಟರಲ್ಲೇ ಇದನ್ನು ಮಾಡಬೇಕಾಗಿತ್ತು. ನಾಲ್ಕು ವರ್ಷಗಳಿಂದ ಇದನ್ನು ಮುಂದೆ ಹಾಕಿದೆ, ಒಂದು ಮಗೂ ಸಹ ತನ್ನ ಪ್ರಾಣವನ್ನು ಕಳೆದುಕೊಂಡಿದೆ ಎಂಬ ವಿಷಯವನ್ನು ಸಹ ನನ್ನ ಗಮನಕ್ಕೆ ತಂದಿದ್ದಾರೆ. ಆದುದರಿಂದ ಜೂನ್ ಒಳಗಾಗಿ ಈ ಕೆಲಸವನ್ನು ನಮ್ಮ ಇಲಾಖೆಯಿಂದಲೆ ಹಣವನ್ನು ಬಿಡುಗಡೆ ಮಾಡಿ ಅದನ್ನು ಪೂರೈಸಿಕೊಡಲಾಗುವುದು.

ಮೂಡಿಗೆರೆಗೆ ವಿದ್ಯಾಪೀಠ ಮಂಜೂರಾತಿ

235 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆಗೆ ವಿದ್ಯಾಪೀಠ ಯಾವಾಗ ಮಂಜೂರಾಯಿತು?

ಆ) ಅದು ಯಾವ ಉದ್ದೇಶಕ್ಕಾಗಿ ಮಂಜೂರಾಯಿತು ಹಾಗೂ ಅದರ ಉದ್ದೇಶ ಈಡೇರಿದೆಯೇ?